ಇ) ಸೇತುವೆಯು ನಿರ್ಮಾಣ ಪೆಚ್ಚೆದ ಜೊತೆಗೆ ನಿರ್ಮಾಣ ಪ್ರಾರಂಭಿಸಿದ ದಿನಾಂಕದಿಂದ ಬಡ್ಡಿ. ಶೇಕಡ ೧೨ರಂತೆ ಶುಲ್ಕ ವಸೂಲಿ ಪೆಚ್ಚೆ ಇವುಗಳನ್ನೆಲ್ಲಾ ವಸೂಲು ಮಾಡಬೇಕಾಗಿರುವುದರಿಂದ ಈ ಸುಂಕ ವನ್ನು ಸುಮಾರು ದಿನಾಂಕ ೩೧-೩-೨೯೪೪ರ ವರೆಗೂ ವಸೂಲಿ ಮಾಡಬೇಕಾಗುವುದು.

ಈ) ತೊಡು ಹಾದಿಗಳು ಸೇರಿದಂತೆ ಸೇತುವೆ ಮತ್ತು ಶುಲ್ಕ ವಸೂಲಿ ಕೇಂದ್ರದ ಕಟ್ಟಡ ಇವಕ್ಕೆ ಖರ್ಚಾದ ಹಣ ಒಟ್ಟು ೩೩,೯೦,೦೦೦ ರೂ. ಗಳು.

ಕಾರವಾರ ಹುಬ್ಬಳ್ಳಿ ರಸ್ತೆ ಕೆಟ್ಟು ಹೋಗಿರುವುದು

೯೭೧ ಶ್ರೀ ಜಿ. ಎಸ್. ಹೆಗ್ಗಡೆ ಅಜ್ಜರಬಳ (ಅಂಕೋಲಾ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಕಾರವಾರ.— ಹುಬ್ಬಳ್ಳಿ ರಸ್ತೆಯು ಕೆಟ್ಟುಹೋಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ. ಹಾಗೂ ದುರಸ್ತಿ ಕಾರ್ಯಕ್ಕೆ ಅಂದಾಜು ಮಾಡಲಾಗಿದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು).—

ಗಮನಕ್ಕೆ ಬಂದಿದೆ. ಈ ರಸ್ತೆಯು ಒಟ್ಟು ೧೬೪ ಕಿ.ಮೀ. ಉದ್ದವಿದ್ದು, ಇದರಲ್ಲಿ ಯಲ್ಲಾಪುರ ದಿಂದ ಬಾಳೆಗುಳಿ ಜಂಕ್ಷನ್ ರಸ್ತೆಯ ಭಾಗವು ಬಹಳ ಕೆಟ್ಟುಹೋಗಿದ್ದು, ಇದರ ದುರಸ್ತಿ ಮತ್ತು ಅಭಿವೃದ್ಧಿ ಅವಶ್ಯಕವಿರುತ್ತದೆ. ಆತ್ಯಾವಶ್ಯಕವಾಗಿರುವ ದುರಸ್ತಿ ಕಾರ್ಯವನ್ನು ಈಗಾಗಲೇ ಕೈಗೊಳ್ಳ ಲಾಗಿದೆ. ಈ ರಸ್ತೆಯ ಅಭಿವೃದ್ಧಿಯನ್ನು ಹಂತ ಹಂತವಾಗಿ ಹಣಕಾಸಿನ ಲಭ್ಯತೆಗನುಗುಣವಾಗಿ ತೆಗೆದುಕೊಳ್ಳಲು ನಿರ್ಧರಿಸಲಾಗಿದೆ.

ವಿವಿದೋದ್ದೇಶ ಇಲಾಖೆ

೯೫೯ ಶ್ರೀ ಎ. ಕೃಷ್ಣಪ್ಪ (ವರ್ತೂರು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಂಗಳೂರು ವಿಭಾಗದಲ್ಲಿ ವಿವಿದೋದ್ದೇಶ ಇಲಾಖೆ ಇರುವುದು ನಿಜವಲ್ಲವೆ ?

ಆ) ಹಾಗಿದ್ದಲ್ಲಿ ಈ ಇಲಾಖೆಗೆ ಅಗತ್ಯವಾಗಿ ಬೇಕಾಗಿರುವ ಸಿಬ್ಬಂದಿ. ವಾಹನ ಪೀಠೋಪಕರಣ ಮುಂತಾದವುಗಳನ್ನು ಒದಗಿಸಲಾಗಿದೆಯೇ ?

ಇ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಬೆಂಗಳೂರು ವಿಭಾಗದಲ್ಲಿ ವಿವಿದೋದ್ದೇಶ ಇಲಾಖೆ ಎಂಬುದು ಇರುವುದಿಲ್ಲ.

ಆ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ.

ಇ) ಉದ್ಭವಿಸುವುದಿಲ್ಲ.

ಮಾರುಕಟ್ಟೆ ಸಂಕೀರ್ಣಕ್ಕೆ ಕೇಂದ್ರದ ಧನ ಸಹಾಯ

೮೧೨ ಶ್ರೀ ಎ. ಕೃಷ್ಣಪ್ಪ (ವರ್ತೂರು).— ಮಾನ್ಯ ಮಾರುಕಟ್ಟೆ ಮತ್ತು ಮಿಷ್ಕ ಜಮೀನು ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬ್ಯಾಮಿಲ್ ಕೆರೆಯ ಆವರಣದಲ್ಲಿ ನಿರ್ಮಾಣ ಮಾಡಲಾಗಿರುವ ಮಾರ್ಕೆಟ್ ಕಾಂಪ್ಲೆಕ್ಸ್‌ಗೆ ಕೇಂದ್ರ ಸರ್ಕಾರ ನೀಡಿರುವ ಧನ ಸಹಾಯವೆಷ್ಟು ?

ಆ) ರಜ್ಯ ಸರ್ಕಾರ ಇದಕ್ಕಾಗಿ ಎಷ್ಟು ಹಣ ಪೆಚ್ಚೆ ಮಾಡಿದೆ ?

ಶ್ರೀ ಕೆ. ಬಿ. ಮಲ್ಲಪ್ಪ (ಪೂರುಕಟ್ಟೆ ಮತ್ತು ಖಿಷ್ಕಿ ಜಮೀನು ಅಭಿವೃದ್ಧಿ ರಾಜ್ಯ ಮಂತ್ರಿಗಳು)

ಅ) ಈ ಕಾಮಗಾರಿಗೆ ಕೇಂದ್ರ ಧನ ಸಹಾಯ ಇನ್ನೂ ಪಡೆದಿರುವುದಿಲ್ಲ.

ಆ) ಇದಕ್ಕೆ ರಾಜ್ಯ ಸರ್ಕಾರದ ಹಣ ಬೆಚ್ಚ ಮಾಡಿರುವುದಿಲ್ಲ.

ಎ. ಪಿ. ಎಂ. ಸಿ. ಚುನಾವಣೆ

೮೧೧ ಶ್ರೀ ಎ. ಕೃಷ್ಣಪ್ಪ (ವರ್ತೂರು).—ಮಾನ್ಯ ನಿಯಂತ್ರಿತ ಮಾರುಕಟ್ಟೆ ಮತ್ತು ಖಿಷ್ಕಿ ಜಮೀನು ಅಭಿವೃದ್ಧಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಜಿಲ್ಲೆಯಲ್ಲಿನ ಎ.ಪಿ.ಎಂ.ಸಿ. ಚುನಾವಣೆಗಳು ಕಳೆದ ೧೯೮೩ ರಲ್ಲಿ ನಡೆದಿದ್ದು ಇದುವರೆಗೂ ಆ ಚುನಾವಣೆಗಳನ್ನು ಮತ್ತೆ ನಡೆಸದಿರಲು ಕಾರಣವೇನು?

ಆ ಬೆಂಗಳೂರು ನಗರ ಜಿಲ್ಲೆಯ ಮೂರು ತಾಲ್ಲೂಕುಗಳಲ್ಲಿ ಆರ್.ಎಂ.ಸಿ. ಮಾರುಕಟ್ಟೆಗಳನ್ನು ಕಟ್ಟಲು ಸರ್ಕಾರ ಉದ್ದೇಶಿಸಿದೆಯೇ ?

ಇ) ಹಾಗಿದ್ದಲ್ಲಿ ಅವುಗಳನ್ನು ಎಲ್ಲೆಲ್ಲಿ ಎಂದು ಕಟ್ಟಿಸಲಾಗುವುದು ?

ಶ್ರೀ ಕೆ. ಬಿ. ಮಲ್ಲಪ್ಪ (ನಿಯಂತ್ರಿತ ಮಾರುಕಟ್ಟೆ ರಾಜ್ಯ ಸಚಿವರು).—

ಅ) ಬೆಂಗಳೂರು ಜಿಲ್ಲೆಯಲ್ಲಿನ ಎ.ಪಿ ಎಂ.ಸಿ. ಗಳ ಅಧಿಕಾರಾವಧಿಯು ಇನ್ನೂ ಮುಗಿಯದ ಪ್ರಯುಕ್ತ ಚುನಾವಣೆ ನಡೆಸಿರುವುದಿಲ್ಲ. ಈಗಿರುವ ಸಮಿತಿಗಳ ಅವಧಿಯು ದಿನಾಂಕ ೩೩-೧೯೮೮ ರಂದು ಮುಕ್ತಾಯಗೊಳ್ಳುವುದು.

ಆ) ಆನೇಕಲ್ ತಾಲ್ಲೂಕಿನಲ್ಲಿ ಉಪಮಾರುಕಟ್ಟೆಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

ಇ) ಚಂದಾಪುರ, ಆನೇಕಲ್ ಮತ್ತು ಜಿಗಣಿಗಳಲ್ಲಿ ಉಪಮಾರುಕಟ್ಟೆಗಳ ಸ್ಥಾಪನೆಯ ಪೂರ್ವ ಭಾವಿ ಕ್ರಮವಾಗಿ ಅಲ್ಲಿ ಸಂತೆ ಮೈದಾನಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಏಳನೇ ತರಗತಿಯ ಜಿಲ್ಲಾ ಮಟ್ಟದ ಪರೀಕ್ಷೆ

೬೫೫ ಶ್ರೀ ಜ್ಲೋಸಿಯಸ್ ಎಂ. ಡಿಸೋಜ (ಮಂಗಳೂರು).—ಮಾನ್ಯ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಮಟ್ಟದ ಏನೇ ತರಗತಿ ಪರೀಕ್ಷಾಪ್ರಶ್ನೆಪತ್ರಿಕೆಗಳನ್ನು ತಯಾರಿಸಲು ಎಷ್ಟು ಟನ್ ಕಾಗದವನ್ನು ಒದಗಿಸಲಾಗಿದೆ.

ಆ) ಈ ಕಾಗದವನ್ನು ಯಾವ ರಾಜ್ಯದಿಂದ ಖರೀದಿಸಲಾಯಿತು.

ಇ) ಈ ಕಾಗದವನ್ನು ಖರೀದಿಸಲು ಎಷ್ಟು ಹಣವನ್ನು ಒದಗಿಸಲಾಗಿದೆ.

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

ಅ) ೧½ ಟನ್ ಬಿಳಿ ಕಾಗದ ರಿಯಾಯಿತಿ ದರದಲ್ಲಿ ಹಂಚಿಕೆ ಮಾಡಿದೆ.

ಆ) ಹಿಂದೂಸ್ಥಾನ್ ಪೇಪರ್ ಕಾರ್ಪೊರೇಷನ್ ಕಲ್ಕತ್ತಾರವರು ನಮ್ಮ ರಾಜ್ಯ ಬೆಳಗೊಳ (ಮಂಡ್ಯ ಜಿಲ್ಲೆ)ಕಾಗದ ಕಾರ್ಖಾನೆಯಿಂದ ಸರಬರಾಜು ಮಾಡುವರು.

ಇ) ರೂ. ೧೨೪೭–೫೦ ಪೈ. ಇವನ್ನು ಜಿಲ್ಲಾ ಪರಿಷತ್ ಮಂಜೂರು ಮಾಡಿದೆ.